

ಹೆಂಡತಿ: 'ರೀ ಸಕ್ಕರೆ ಮುಗಿದುಹೋಗಿದೆ. ಕಾಫಿ ಮಾಡಬೇಕು. ಬೇಗ ಅಂಗಡಿಗೆ ಹೋಗಿ ಒಂದು ಕೆ.ಜಿ. ತನ್ನಿ.'

ಗಂಡ: 'ಸಕ್ಕರೆ ನಿನ್ನ ತುಟಿಗಳಲ್ಲೇ ಇದೆಯಲ್ಲಾ! ಮತ್ತ್ಯಾಕೆ ಬೇಕು?'

ಹೆಂಡತಿ: 'ಕಾಫಿಗೆ ನಿಮ್ಮ ಗೆಳೆಯ ಬರುತ್ತಾನೆ ಎಂದಿದ್ರಿ! ಆಗೇನು ಮಾಡಲಿ?'

★★★

ಜೇಲರ್ (ಕೈದಿಗೆ): 'ನಾಳೆ ನಿನ್ನನ್ನು ಗಲ್ಲಿಗೇರಿಸಲಾಗುತ್ತದೆ! ನಿನ್ನ ಕೊನೇ ಆಸೆ ಏನಿದೆ ಹೇಳು ತೀರಿಸುತ್ತೇನೆ.'

ಕೈದಿ: 'ಇಲ್ಲಿಂದ ತಪ್ಪಿಸಿಕೊಂಡು ಹೋಗುವುದು ಹೇಗೆ ಎಂದು ತಿಳಿಸಿಬಿಡಿ ಸಾಕು.'

★★★

ನ್ಯಾಯಾಧೀಶ: 'ವಿಪರೀತ ಹಲ್ಲು ನೋವು!'

ದಂತವೈದ್ಯ: 'ಹಲ್ಲನ್ನು ಕಿತ್ತುಬಿಡುತ್ತೇನೆ. ಆಗ ನೋವೇ ಇರುವುದಿಲ್ಲ.'

ನ್ಯಾಯಾಧೀಶ ಆತನ ಕೈ ಹಿಡಿದು: 'ನಾನು ಹಲ್ಲನ್ನೇ ಕೀಳುವೆ. ಹಲ್ಲನ್ನು ಬಿಟ್ಟು ಬೇರೇನನ್ನೂ ಕೀಳುವುದಿಲ್ಲ ಎಂದು ಪ್ರಮಾಣ ಮಾಡು'.

ಸಂಗ್ರಹ: **ಎಂ.ಕೆ. ಮಂಜುನಾಥ್, ಬೆಂಗಳೂರು**




ಟೀಚರ್: ಮಕ್ಕಳೇ ಆನೆ ದೊಡ್ಡದೋ ಇರುವೆ ದೊಡ್ಡದೋ?

ಮಕ್ಕಳು: ಎರಡರ ಎಸೆಸ್ಸೆಲ್ಸಿ ಮಾರ್ಕ್ಸ್‌ಕಾರ್ಡ್ ಕೊಡಿ ಮಿಸ್. ಡೇಟ್ ಆಫ್ ಬರ್ತ್ ನೋಡಿ ಹೇಳ್ತೀವಿ!

★★★

ನೀತಿ ಶಿಕ್ಷಣದ ಟೀಚರ್: ಮಕ್ಕಳೇ ನಿಮಗೆ ನಾನು ಇಷ್ಟನೋ ನಿಮ್ಮಮ್ಮ ಇಷ್ಟನೋ?

ಮಕ್ಕಳು: (ಒಕ್ಕೊರಲಿನಿಂದ) ನೀವೇ ಮಿಸ್.

ಟೀಚರ್: ಯಾಕೆ?

ಮಕ್ಕಳು: ನೀವಾದ್ರೆ ವಾರಕ್ಕೆ ಎರಡು ಸಲ ಮಾತ್ರ ಉಪದೇಶ ಮಾಡೋದು. ನಮ್ಮಮ್ಮ ದಿನಾ ಮಾಡ್ತಾನೆ ಇರ್‍ತಾರೆ!

★★★

ಮಂಟಾ ಹುಡುಗಿ ನೋಡಕ್ಕೆ ಹೋದ. ಅವಳಮ್ಮ ಹೇಳಿದ್ರು– 'ನಮ್ಮ ಹುಡುಗಿ ಇನ್ನೂ ಓದ್ತಿದ್ದಾಳೆ'
ಮಂಟಾ: ಓದ್ಲಿ... ಓದ್ಲಿ ಪರ್ವಾಗಿಲ್ಲ. ನಾ ಒಂದು ಗಂಟೆ ಬಿಟ್ಟು ಬಂದು ನೋಡ್ತೀನಿ ಎನ್ನುತ್ತಾ ಹೊರ ನಡೆದ!

★★★



ಮಂಟಾ: 'ರಿಜಿಸ್ಟರ್ ಮದ್ವೆ' ಆಗೋಣ ಅಂತ್ಹೇಳಿ ನಂಗೆ ಮೋಸ ಮಾಡ್ದೆ.

ಗರ್ಲ್ ಫ್ರೆಂಡ್: ನೀನೇ ನಿನ್ನೆ ಬರ್ಲಿಲ್ಲ.

ಮಂಟಾ: ಸುಳ್ಳು, ನಿನ್ನೆ ಇಡೀ ದಿನ ನಾನು ಪೋಸ್ಟಾಫೀಸ್ ಹೊರ್ಗಡೆನೇ ಕಾಯ್ತಾ ಇದ್ದೆ!

ಸಂಗ್ರಹ: **ವಿನುತ ಮುರಳೀಧರ, ತೀರ್ಥಹಳ್ಳಿ**



ಕಸ್ಟಮರ್‌ಕೇರ್-ಕಮ್ಮನಹಳ್ಳಿ: 9663546007